ಮೇಲ್ದರ್ಜೆಗೇರಿಸಲು ನಿರ್ಧರಿಸಲಾಗಿದೆ. ಈ ಉದ್ದೇಶಕ್ಕಾಗಿ ಪರಿಷ್ಕೃತ ಅಂದಾಜು ವೆಚ್ಚ, ನೀಲಿ ನಕ್ಷೆಗಳನ್ನು ತಯಾರಿಸಿ, ಆಡಳಿತಾತ್ಮಕ ಅನುಮೋದನೆ ಪಡೆಯಲು ಪ್ರಸ್ತಾವನೆ ಸಲ್ಲಿಸುವಲ್ಲಿ ಕಾಲಾವಕಾಶ ಅಗತ್ಯವಿದೆ. ಈ ಕಾರಣದಿಂದಾಗಿ ಕೆಲಸ ಪ್ರಾರಂಭ ಮಾಡಲು ವಿಳಂಬವಾಗಿರುತ್ತದೆ.

ಪರಿಸರ ಇಲಾಖೆಯ ಮಂಗಳೂರು ವಿಭಾಗೀಯ ಕಛೇರಿ

1324 (1687) ಶ್ರೀ ಯು.ಆರ್.ಸಭಾಪತಿ (ಉಡುಪಿ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪರಿಸರ ಇಲಾಖೆಯ ಮಂಗಳೂರು ವಿಭಾಗೀಯ ಕಛೇರಿ ಹಾಗೂ ಅಲ್ಲಿನ ಆಡಳಿತ ವರ್ಗ ಸಿಬ್ಬಂದಿಗಳ ಕಾರ್ಯ ವ್ಯಾಪ್ತಿಗಳೇನು; ಈ ಮಂಜೂರಾತಿಯಾದ ಹುದ್ದೆಗಳೆಷ್ಟು? ಖಾಲಿ ಇರುವ ಹುದ್ದೆಗಳು ಯಾವುವು?

ಆ) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿ ಪರಿಸರ ಇಲಾಖಾ ವಿಭಾಗೀಯ ಕಛೇರಿಯ ಅಭಿವೃದ್ಧಿ ಕಾರ್ಯಕ್ಕಾಗಿ ಸರ್ಕಾರವು ಬಿಡುಗಡೆ ಗೊಳಿಸಿದ ಹಣವೆಷ್ಟು?

ಶ್ರೀ ಕೆ.ಎಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಮಂಗಳೂರಿನ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಕಾರ್ಯವ್ಯಾಪ್ತಿಯಲ್ಲಿ ಹಾಸನ, ದಕ್ಷಿಣ ಕನ್ನಡ, ಉಡುಪಿ ಕೊಡಗು ಹಾಗೂ ಚಿಕ್ಕಮಗಳೂರು ಜಿಲ್ಲೆಗಳು ಇರುತ್ತವೆ. ಈ ಕಛೇರಿಯಲ್ಲಿ ಮಂಜೂರು ಆದ ಹುದ್ದೆಗಳು 18 ಇದ್ದು, ಈ ಹುದ್ದೆಗಳ ಪೈಕಿ ಈ ಕೆಳಕಂಡ 6 ಹುದ್ದೆಗಳು ಖಾಲಿ ಇರುತ್ತವೆ:

1)	ಕಾನೂನು ಸಹಾಯಕರು	-	ಒಂದು
2)	ಪ್ರಥಮ ದರ್ಜೆ ಸಹಾಯಕರು	-	ಒಂದು
3)	ಶೀಘ್ರಲಿಪಿಗಾರರು	-	ಒಂದು
4)	ಸೀನಿಯರ್ ಪ್ರೋಗ್ರಾಮರ್	-	ಒಂದು
5)	ಬೆರಳಚ್ಚುಗಾರರು ಡಾಟ ಎಂಟ್ರಿ ಆಪರೇಟರ್	-	ಒಂದು
6)	ಜವಾನ: ವಾಚ್‌ಮೆನ್	-	ಒಂದು

ಆ) ವಿಭಾಗೀಯ ಕಛೇರಿಯ ಲ್ಯಾಬ್‌ನ್ನು ಮಂಗಳೂರಿನಲ್ಲಿ ಅಭಿವೃದ್ಧಿ ಪಡಿಸಲು 16 ಲಕ್ಷ ಅನುದಾನವನ್ನು ರಾಜ್ಯ ಸರ್ಕಾರ ಬಿಡುಗಡೆ ಮಾಡಿರುತ್ತದೆ.

ರಸ್ತೆಗಳ ನಿರ್ವಹಣ ಮೊತ್ತ

1325 (1533) ಶ್ರೀ ಸಭಾಪತಿ ಯು.ಆರ್ (ಉಡುಪಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಳೆಯಿಂದ ತೀವ್ರ ಹಾನಿಗೊಳ್ಳುವ ಇಲಾಖಾ ರಸ್ತೆಗಳಿಗೆ ದುರಸ್ತಿಗೊಳಿಸಲು ಒದಗಿಸಿದ ಹಣ ಎಷ್ಟು; (1998-99, 1999-2000ನೇ ಸಾಲಿನಲ್ಲಿ)

ಆ) ಬಿಡುಗಡೆಯಾದ ಹಣದಲ್ಲಿ ಯಾವುದೇ ರೀತಿ ದುರಸ್ತಿ ನಿರ್ವಹಣಾ ಆಗದೆ ಹಣ ದುರುಪಯೋಗವಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಈ ಬಗ್ಗೆ ಸರಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಧರಮ್ ಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಮಳೆಯಿಂದ ಹಾನಿಗೊಳಗಾದ ರಸ್ತೆಗಳ ದುರಸ್ತಿಗೆ ಒದಗಿಸಿದ ಹಣ.

1998-99ರಲ್ಲಿ	1966.31 ಲಕ್ಷ ರೂ.ಗಳು
1999-2000	4852.55 ಲಕ್ಷ ರೂ.ಗಳು

ಆ) ಈ ಹಣದಲ್ಲಿ 1998-99ನೇ ಸಾಲಿನ ಕಾಮಗಾರಿಗಳು ಪೂರ್ಣಗೊಂಡಿದ್ದು ಯಾವುದೇ ದುರಪಯೋಗವಾಗಿರುವುದಿಲ್ಲ. 1999-2000 ಸಾಲಿನಲ್ಲಿ ಬಿಡುಗಡೆಯಾದ ಹಣ ವೆಚ್ಚ ಮಾಡಿರುವುದಿಲ್ಲ. ಆದ್ದರಿಂದ ಯಾವುದೇ ಕ್ರಮ ಅಗತ್ಯವಿರುವುದಿಲ್ಲ.

ರಾಜ್ಯದಲ್ಲಿ ನಡೆದ 4ನೇ ರಾಷ್ಟ್ರೀಯ ಕ್ರೀಡಾಕೂಟ

1226 (1833) ಶ್ರೀ ಸಂಪಂಗಿ.ಎನ್(ಬಾಗೇಪಲ್ಲಿ) : ಮಾನ್ಯ ಯುವಜನಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ನಡೆದಂತಹ 4ನೇ ರಾಷ್ಟ್ರೀಯ ಕ್ರೀಡಾ ಕೂಟಗಳಿಗೆ ವಿವಿಧ ಬಾಬ್ತುಗಳಿಗಾಗಿ ವೆಚ್ಚ ಮಾಡಲಾದ ಹಣ ಮೊತ್ತವೆಷ್ಟು.

ಆ) ಈ ಕ್ರೀಡಾ ಕೂಟಕ್ಕೆ ವೆಚ್ಚಗಳಿಗಾಗಿ ಎಷ್ಟು ಹಣವನ್ನು ನಿಗಧಿಪಡಿಸಲಾಗಿತ್ತು. ನಿಗಧಿಪಡಿಸಿದ ಹಣಕ್ಕಿಂತ ಎಷ್ಟು ಕೋಟಿ ರೂಪಾಯಿಗಳನ್ನು ಹೆಚ್ಚುವರಿಯಾಗಿ ಖರ್ಚು ಮಾಡಲಾಯಿತು. ಯಾವ ಯಾವ ಕಾರ್ಯಗಳಿಗೆ ಎಷ್ಟೆಷ್ಟು ಮೊತ್ತದ ಹಣವನ್ನು ಖರ್ಚು ಮಾಡಲಾಯಿತು.

ಇ) ಈ ಪೈಕಿ ಸರ್ಕಾರದಿಂದ ಬಂದಿದ್ದ ಹಣವೆಷ್ಟು? ರಾಜ್ಯ ಸರ್ಕಾರದಿಂದ ಖರ್ಚಾಗಿರುವ ಹಣವೆಷ್ಟು ?

ಈ) ನಿಗಧಿತ ಹಣಕ್ಕಿಂತ ಕೋಟ್ಯಾಂತರ ರೂಪಾಯಿಗಳನ್ನು ದುಂದು ವೆಚ್ಚ ಮಾಡುವ ಮೂಲಕ ರಾಜ್ಯದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿರುವುದು ನಿಜವಲ್ಲವೇ?

ಉ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು? ಅನಗತ್ಯ ದುಂದು ವೆಚ್ಚಕ್ಕೆ ಕಾರಣರಾದಂತಹ ಮೇಲೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳಲಿದೆ.

ಊ) ಆ ಸಮಯದಲ್ಲಿ ಊಟ ಉಪಚಾರಗಳನ್ನು ಸರಬರಾಜು ಮಾಡಲು ಯಾವ ವ್ಯಕ್ತಿಗಳಿಗೆ ಅಥವಾ ಸಂಸ್ಥೆಗಳಿಗೆ ಟೆಂಡರ್ ನೀಡಲಾಗಿತ್ತು. ಅದಕ್ಕೆ ಖರ್ಚಾದ ಹಣವೆಷ್ಟು;

ಋ) ಈ ಕ್ರೀಡಾ ಕೂಟಕ್ಕೆ ಅನಗತ್ಯ ದುಂದು ವೆಚ್ಚ ಮಾಡಿದ್ದರೂ ಸಹ, ಊಟ ಉಪಚಾರಗಳನ್ನು ಸರಬರಾಜು ಮಾಡಿದವರಿಗೆ ಇದುವರೆವಿಗೆ ಹಣವನ್ನು ಪಾವತಿ ಮಾಡಿಲ್ಲದಿರುವುದು ನಿಜವೇ.